Registered : # RNP/ KA/ BGS/ 2172/ 2018-20 Dtd. 02-07-2012
Posted at PSO, Mysore Road Bengaluru on 13th of Every Month

ಪುಟಗಳು–20

# ಅತಿಥಿ ದೇವೋಭವ

ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘದ ಮುಖವಾಣಿ www.bangalorehotelsassn.com

ಸಂಪುಟ : 9 ಸಂಚಿಕೆ : 1 RNI # : KAR KAN/2009/30387 Dtd: 19-03-12 ಮೇ–2018 ರೂ. 10/–



**ಶ್ವೇತಾ ಎಂ.**

ಯುಪಿಎಸ್‌ಸಿ ಪರೀಕ್ಷೆಯಲ್ಲಿ
ರಾಜ್ಯಕ್ಕೆ 3ನೇ ರ್‍ಯಾಂಕ್

## ಕೆಪಿಹೆಚ್‌ಆರ್‌ಎ ಪದಾಧಿಕಾರಿಗಳ ಆಯ್ಕೆಗೆ ಮುಹೂರ್ತ ಫಿಕ್ಸ್

**ದಿನಾಂಕ : 15–6–2018**

**ಸಮಯ : ಅಪರಾಹ್ನ 3 ಗಂಟೆಗೆ**


**ಸ್ಥಳ : ಕೆಪಿಹೆಚ್‌ಆರ್‌ಎ ಕಾರ್ಯಾಲಯ**



ಕೇಟರಿಂಗ್ ಇಂಡಿಯಾ 2018
FREE ENTRY
CATERING INDIA 2018
TENT DECOR AND CATERING
INDIA-2018
Supported by
BANGALORE
Karnataka Pradesh Hotel
& Restaurants Association
Premier Opportunity
Destination
Route Map
Majestic
NICE Express Highway
NH4
EXHIBITION ON COMMERCIAL
CATERING & HOTELIER EQUIPMENTS
FOR FREE VISIT GIVE MISSED CALL ON :
+91 88003 43005
For Stall
Contact
+91 90366 64964
95353 88966
5 6 7 8 JULY 2018
VENUE : NEELAKANTA CONVENTION CENTRE-BANGALORE
Email : marketing@tdci.co.in
www.tentdecorcateringindia.com
Oragniser: EAGLE TRADE FAIRS


indifi
OUR LOAN. YOUR GROWTH
Whether you are in the business of Hotels, Restaurants, or Food Retail, Indifi gets you a loan easily, quickly and without collaterals.
To Avail:
9810473576
www.indifi.com
while calling please mention promo code - 'BLR' & get special offers
Up to 50 Lacs
No Collateral
24 Hours Approval*
Loans that Fit your Business
Minimum Documentation
T&C apply

# ಜಯನಗರ ಶಾಸಕ ಶ್ರೀ ವಿಜಯ ಕುಮಾರ್ ನಿಧನ




ಬೆಂಗಳೂರು: ಬೆಂಗಳೂರಿನ ಪ್ರಮುಖ ವಿಧಾನಸಭಾ ಕ್ಷೇತ್ರಗಳಲ್ಲೊಂದಾದ ಜಯನಗರ ಕ್ಷೇತ್ರದ ಭಾರತೀಯ ಜನತಾ ಪಕ್ಷದ ಅಭ್ಯರ್ಥಿಯಾಗಿದ್ದ ಶ್ರೀ ಬಿ.ಎನ್.ವಿಜಯಕುಮಾರ್ ಅವರು 4–5–2018ರಂದು ಹೃದಯಾಘಾತದಿಂದ ನಿಧನ ಹೊಂದಿದರು. ಬ್ರಹ್ಮಚಾರಿಯಾಗಿದ್ದ ಅವರು ಭ್ರಷ್ಟಾಚಾರದ ಲವ ಲೇಶವನ್ನೂ ಅಂಟಿಸಿಕೊಳ್ಳದೇ ಸ್ವಚ್ಛ ಶಾಸಕ ಎಂದೇ ಜನಪ್ರಿಯರಾಗಿದ್ದರು. ಜಯನಗರಾದ್ಯಂತ ನೀರಿಂಗಿಸುವ ವ್ಯವಸ್ಥೆ, ಹತ್ತನೇ ತರಗತಿಯ ಮಕ್ಕಳಿಗೆ ಹೆಸರಾಂತ ಶಿಕ್ಷಣ ತಜ್ಞರಿಂದ ಉಚಿತ ಟ್ಯೂಷನ್ ವ್ಯವಸ್ಥೆ, ಈ ಟ್ಯೂಷನ್ ಪಡೆದವರಲ್ಲಿ 90% ಗಿಂತ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ಮತ್ತಿರ ಜನಪರ ಯೋಜನೆಗಳಿಂದ ಜನಮೆಚ್ಚುಗೆ ಗಳಿಸಿದ್ದರು. ಅತ್ಯಂತ ಸರಳತೆಯನ್ನು ಮೈಗೂಡಿಸಿಕೊಂಡಿದ್ದ ಅವರು ಜನಸಾಮಾನ್ಯರೊಂದಿಗೆ ಸಾಮಾನ್ಯರಂತೆ ಬೆರೆಯುತ್ತಿದ್ದರು. ಕಳೆದ ಎರಡು ಅವಧಿಗಳಲ್ಲಿ ತಮ್ಮ ಎದುರಾಳಿ ಅಭ್ಯರ್ಥಿಯ ಎದುರು ಬಹುಮತದ ಜಯಗಳಿಸಿದ್ದ ಅವರು ಹ್ಯಾಟ್ರಿಕ್ ಗೆಲುವಿನ ಹಾದಿಯಲ್ಲಿದ್ದರು. ಹತ್ತಾರು ದಿನಗಳ ಹಿಂದಷ್ಟೇ ಹೃದಯಾಘಾತಕ್ಕೊಳಗಗಿ ಚಿಕಿತ್ಸೆ ಪಡೆದಿದ್ದ ಅವರು ಹೆಚ್ಚು ಶ್ರಮವಹಿಸದಂತೆ ವೈದ್ಯರು ಸಲಹೆ ನೀಡಿದ್ದರು. ಆದರೆ ಚುನಾವಣೆಯ ಹಿನ್ನಲೆಯಲ್ಲಿ ಬೆಳಿಗ್ಗೆಯಿಂದ ಸಂಜೆಯ ವರೆಗೂ ಅವಿಶ್ರಾಂತವಾಗಿ ಜನರ ಮಧ್ಯೆ ಪಾದಯಾತ್ರೆ ನಡೆಸುತ್ತಿದ್ದ ಅವರು ಹೃದಯಾಘಾತಕ್ಕೊಳಗಾಗಿ ಕುಸಿದು ಬಿದ್ದರು. ತಕ್ಷಣ ಅವರನ್ನು ಆಸ್ಪತ್ರೆಗೆ ಸೇರಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದರು. ಮೃತರ ಆತ್ಮಕ್ಕೆ ಶಾಂತಿ ಸಿಗಲೆಂದು ಬೃಹತ್ ಬೆಂಗಳೂರು ಹೋಟೆಲುಗಳ ಸಂಘವು ಪ್ರಾರ್ಥಿಸುತ್ತದೆ.

# ಬೃಹತ್ ಬೆಂಗಳೂರು ಹೋಟಲುಗಳ ಸಂಘ (ರಿ)

## BRUHAT BANGALORE HOTELS ASSOICATION (REGD,)


ಗೌರವಾಧ್ಯಕ್ಷರು
**ಶ್ರೀ ಕೆ.ಉಮೇಶ್ ಶೆಟ್ಟಿ**
ಬಿ.ಬಿ.ಎಂ.ಪಿ. ಸದಸ್ಯರು
ಗೋವಿಂದರಾಜನಗರ ವಾರ್ಡ್
ಮೊ. : 9845844447

ಅಧ್ಯಕ್ಷರು
**ಶ್ರೀ ಚಂದ್ರಶೇಖರ ಹೆಬ್ಬಾರ್.ಬಿ**
ಮೊ: 9845117351

ಉಪಾಧ್ಯಕ್ಷರು
**ಶ್ರೀ ಪಿ.ಸಿ.ರಾವ್**
ಮೊ: 9844494636

ಉಪಾಧ್ಯಕ್ಷರು
**ಶ್ರೀ ಎಂ.ವಿ.ರಾಘವೇಂದ್ರ**
ಮೊ: 9880093264

ಗೌರವ ಕಾರ್ಯದರ್ಶಿ
**ಶ್ರೀ ಸುಬ್ರಮಣ್ಯ ಹೊಳ್ಳ.ಎಸ್**
ಮೊ: 9845042007

ಜಂಟಿ ಕಾರ್ಯದರ್ಶಿ
**ಶ್ರೀ ಚಂದ್ರಹಾಸ.ಎಸ್**
ಮೊ: 9448881200

ಜಂಟಿ ಕಾರ್ಯದರ್ಶಿ
**ಶ್ರೀ ಕೆ.ಬಾಲಚಂದ್ರ ಶೆಟ್ಟಿ**
ಮೊ: 9844006825

ಖಜಾಂಚಿ
**ಶ್ರೀ ವೀರೇಂದ್ರ ಎನ್.ಕಾಮತ್**
ಮೊ: 9845259099


**ಅತಿಥಿ ದೇವೋಭವ–ಮೇ–2018**

## ಮೆನುಕಾರ್ಡ್


| ಕ್ರ. ಸಂಖ್ಯೆ | ವಿವರ | ಪುಟ ಸಂಖ್ಯೆ |
|---|---|---|
| 1. | ಅಧ್ಯಕ್ಷರ ನುಡಿ | – 6 |
| 2. | ತರಬೇತಿ ಕಾರ್ಯಾಗಾರ | – 11 |
| 3. | ನಾಮಫಲಕದಲ್ಲಿ ಜಿ.ಎಸ್.ಟಿ. ಸಂಖ್ಯೆ ಕಡ್ಡಾಯ | – 12 |
| 4. | ಯುಪಿಎಸ್‌ಸಿಯಲ್ಲಿ ಶ್ವೇತ ಎಂ. ಸಾಧನೆ | – 13 |
| 5. | ಕೇಂದ್ರಸಚಿವರ ಭೇಟಿ | – 14 |
| 6. | ಎಫ್.ಕೆ.ಸಿ.ಸಿ.ಐ. ಅಧ್ಯಕ್ಷರಾಗಿ ಸುಧಾಕರ ಶೆಟ್ಟಿ | – 15 |
| 7. | ಕನಿಷ್ಠವೇತನ ಶೆಡ್ಯೂಲ್ | – 16 |



**ಅತಿಥಿದೇವೋಭವ ಪತ್ರಿಕೆಗೆ ಜಾಹೀರಾತು ನೀಡಿ**




**ಸಂಘಕ್ಕೆ ಸದಸ್ಯರಾಗಿ ಸಂಘವನ್ನು ಬೆಂಬಲಿಸಿ**

**ಮತದಾನ ಮಾಡಲು ಮರೆಯಬೇಡಿ**



ಬಿ. ಚಂದ್ರಶೇಖರ ಹೆಬ್ಬಾರ್

# ಅಧ್ಯಕ್ಷರ ನುಡಿ

## ಕೆಪಿಹೆಚ್‌ಆರ್‌ಎ ಪದಾಧಿಕಾರಿಗಳ ಆಯ್ಕೆಗೆ ಮುಹೂರ್ತ ಫಿಕ್ಸ್

ನಾಡಿನ ಸಮಸ್ತ ಹೋಟೆಲು ಉದ್ಯಮದಾರರಿಗೆ ವಂದನೆಗಳು.

ಮಿತ್ರರೇ,

ಕರ್ನಾಟಕ ಪ್ರದೇಶ ಹೋಟೆಲು ಮತ್ತು ಉಪಾಹಾರ ಮಂದಿರಗಳ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಚುನಾವಣೆಗೆ ಮುಹೂರ್ತ ಫಿಕ್ಸಾಗಿದೆ. ಬರುವ ಜೂನ್ ತಿಂಗಳ 15ನೇ ತಾರೀಖಿನಂದು ಅಪರಾಹ್ನ 3 ಗಂಟೆಗೆ ಕೆಪಿಹೆಚ್‌ಅರ್‌ಎ ಕಾರ್ಯಾಲಯದಲ್ಲೇ ಚುನಾವಣೆ ನಡೆಸುವುದೆಂದು ಸಂಘದ ಪ್ರಕಟನೆಯಲ್ಲಿ ತಿಳಿಸಲಾಗಿದೆ. ರಾಜ್ಯದ ಮೂವತ್ತು ಜಿಲ್ಲೆಗಳ ಮತ್ತು ಹಲವಾರು ತಾಲ್ಲೂಕುಗಳ ಹೋಟೆಲು ಸಂಘಗಳ ಪದಾಧಿಕಾರಿಗಳು ಮತ್ತು ಕೆಪಿಹೆಚ್‌ಆರ್‌ಎಯ ಕಾರ್ಯಕಾರಿ ಸಮಿತಿ ಸದಸ್ಯರು ಈ ಚುನಾವಣೆಯ ಪ್ರಕ್ರಿಯೆಯಲ್ಲಿ ಭಾಗವಹಿಸಲಿದ್ದಾರೆ.

ಹಾಗೆಯೇ ಬೃಹತ್ ಬೆಂಗಳೂರು ಹೋಟೆಲುಗಳ ಸಂಘದ ಸದಸ್ಯರ ಮತ್ತು ವಿವಿಧ ಜಿಲ್ಲೆಗಳ ನೂರಾರು ಮಿತ್ರರ ಒತ್ತಾಯದ ಮೇರೆಗೆ ನಾನು ಈ ಬಾರಿ ಕೆಪಿಹೆಚ್‌ಆರ್‌ಎ ಅಧ್ಯಕ್ಷ ಪದವಿಯ ಚುನಾವಣೆಯಲ್ಲಿ ಅಭ್ಯರ್ಥಿಯಾಗಿದ್ದೇನೆ.

ಕರ್ನಾಟಕ ಪ್ರದೇಶ ಹೋಟೆಲು ಮತ್ತು ಉಪಾಹಾರ ಮಂದಿರಗಳ ಸಂಘದಲ್ಲಿ ಕಳೆದ ನಾಲ್ಕು ದಶಕಗಳಿಂದ ಸದಸ್ಯ ನಾಗಿರುವ ಸುಮಾರು ಮೂರೂವರೆ ದಶಕಗಳಿಂದ ಕಾರ್ಯಕಾರಿ ಸಮಿತಿ ಸದಸ್ಯನಾಗಿದ್ದೇನೆ. ಕಳೆದ ಮೂವತ್ತು ವರ್ಷಗಳ ಅವಧಿಯಲ್ಲಿ ರಾಜ್ಯ ಮಟ್ಟದಲ್ಲಿ ನಡೆದ ಬಹುತೇಕ ಎಲ್ಲ ಹೋಟೆಲು ಉದ್ಯಮದಾರರ ಸಮಾವೇಶಗಳಲ್ಲಿ ಹಾಗೂ ವಾರ್ಷಿಕ ಸಭೆ– ಸಮಾರಂಭಗಳಲ್ಲಿ, ಪ್ರಶಸ್ತಿ ಪುರಸ್ಕಾರ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇನೆ ಎನ್ನುವುದು ನನಗೆ ಅಭಿಮಾನದ ಸಂಗತಿ.

ಹುಬ್ಬಳ್ಳಿಯಲ್ಲಿ ನಡೆದ ರಾಜ್ಯ ಮಟ್ಟದ ಸಮಾವೇಶಕ್ಕೆ ಅತ್ಯಧಿಕ ಮೊತ್ತದ ದೇಣಿಗೆ ಕೊಟ್ಟದ್ದು ನಮ್ಮ ಬೃಹತ್ ಬೆಂಗಳೂರು ಹೋಟೆಲುಗಳ ಸಂಘದ ವತಿಯಿಂದ ಎನ್ನುವುದನ್ನು ಎದೆ ತಟ್ಟಿ ಹೇಳಿಕೊಳ್ಳುತ್ತೇವೆ.

ಕ್ರಿಯಾಶೀಲವಾದ ಭಾಗವಹಿಸುವಿಕೆಯೇ ನಮಗೆ ಸಂಘದ ಮೇಲೆ ಒಂದು ಹೊಣೆಗಾರಿಕೆಯನ್ನೂ, ಹಕ್ಕನ್ನೂ ಒದಗಿಸುತ್ತದೆ. ದಶಕಗಳ ಕಾಲ ಕೆಲಸ ಮಾಡಿದ್ದೇವೆ ಎಂದ ಮೇಲೆ ಅದರ ಎಲ್ಲ ಚಟುವಟಿಕೆಗಳ ಮೇಲೂ ನಮಗೊಂದು ಅಧಿಕಾರವಿರುತ್ತದೆ. ಅಲ್ಲಿನ ಎಲ್ಲ ಚಟುವಟಿಕೆಗಳನ್ನು ಹತ್ತಿರದಿಂದ ನೋಡಿಕೊಂಡು ಬಂದಿದ್ದೇನೆ. ಹೇಗೆ ನಡೆಯುತ್ತಿದೆ ಮತ್ತು ಹೇಗೆ ನಡೆಯಬೇಕು ಎಂಬುದರ ಸ್ಪಷ್ಟ ಕಲ್ಪನೆ ನನಗಿದೆ. ಈಗ ಚುನವಣಾ ಪರ್ವ.

ಕೆಪಿಹೆಚ್‌ಆರ್‌ಎಗೆ ಹೊಸದೊಂದು ಆಯಾಮ ಒದಗಿಸುವ ದೃಷ್ಟಿಯಿಂದ ಸಂಘದ ಅಧ್ಯಕ್ಷ ಗಾದಿಗೆ ನಡೆಯಲಿರುವ ಚುನಾವಣೆಯಲ್ಲಿ ಸ್ಪರ್ಧಿಸುವ ಉದ್ದೇಶದೊಂದಿಗೆ ಅಭ್ಯರ್ಥನವನ್ನು ಘೋಷಿಸಿರುತ್ತೇನೆ.

ಹಿಂದಿನವರ ಕಾರ್ಯವೈಖರಿಯನ್ನು ನಾನು ಟೀಕಿಸುವುದಿಲ್ಲ. ನನ್ನ ಅನುಭವವನ್ನು ನಾನು ಹೇಳಿಕೊಳ್ಳುವುದಿಲ್ಲ. ನನ್ನ ಅನುಭವದ ಸಾಕ್ಷಿಯಾಗಿ, ಸಂಕೇತವಾಗಿ ಕಳೆದ ಎರಡು ದಶಕಗಳಲ್ಲಿ ಕರ್ನಾಟಕದ ಬೃಹತ್ ಜಿಲ್ಲಾ ಹೋಟೆಲು ಉದ್ಯಮದಾರರ ಸಂಘಟನೆಯಾಗಿ ಬೆಳೆದು ನಿಂತ ಬೃಹತ್ ಬೆಂಗಳೂರು ಹೋಟೆಲುಗಳ ಸಂಘವಿದೆ. ಅದರ ಸ್ವಂತದ್ದಾದ ಅತ್ಯಾಧುನಿಕ ಸುಸಜ್ಜಿತ ಕಟ್ಟಡವಿದೆ. ಸಮಾಜಸೇವೆಯಿಂದ ಜನಮಾನಸದಲ್ಲಿ, ಹೋರಾಟದಿಂದ ಸರಕಾರೀ ಇಲಾಖೆಗಳಲ್ಲಿ, ಸಂವಹನ ವೈಖರಿಯಿಂದ ಮಾಧ್ಯಮ ಜಗತ್ತಿನಲ್ಲಿ, ಕಷ್ಟಸುಖಕ್ಕೆ ಸ್ಪಂದನೆಯಿಂದ ಸದಸ್ಯ ಬಂಧುಗಳಲ್ಲಿ ಬೆಳೆಸಿಕೊಂಡ ಅದರದ್ದೇ ಆದ ಪ್ರತ್ಯೇಕತೆ ಇದೆ. ಈ ಮಟ್ಟಕ್ಕೆ ಸಂಘವನ್ನು ಬೆಳೆಸಲು ನಾನು ಪಟ್ಟ ಪರಿಶ್ರಮದ ಕತೆಯಿದೆ.

ಕರ್ನಾಟಕ ಪ್ರದೇಶ ಹೋಟೆಲು ಮತ್ತು ಉಪಾಹಾರ ಮಂದಿರಗಳ ಸಂಘವೂ ಹೀಗೆಯೇ ಬೆಳೆಯಬೇಕು ಎಂಬುದು ನನ್ನ ಅಪೇಕ್ಷೆ. ಅದಕ್ಕಾಗಿ ಕಟಿಬದ್ಧನಾಗಿ ದುಡಿಯುವ ಅದಮ್ಯ ಆಶಯವಿದೆ.

ಮೂರು ವರ್ಷಗಳ ಹಿಂದೆಯೂ ಇದೇ ರೀತಿಯಲ್ಲಿ ಸಂಘದ ಅಧ್ಯಕ್ಷರು ಬದಲಾಗಬೇಕು ಎಂಬ ಆಶಯದೊಂದಿಗೆ ಒಂದು ಪರೋಕ್ಷ ಆಂದೋಲನವನ್ನೇ ನಡೆಸಲಾಗಿತ್ತು. ಇದು ನನ್ನೊಬ್ಬನ ಅಭಿಮತವಾಗಿರಲಿಲ್ಲ. ತೀರ್ಮಾನವೂ ಆಗಿರಲಿಲ್ಲ. ಎಲ್ಲರೂ ಬಯಸಿದ್ದ ಒಂದು ಬದಲಾವಣೆಗಾಗಿ ಬದಲಾವಣೆ ಎಂಬ ಘೋಷಣೆಯೊಂದಿಗೆ ಕೆಪಿಹೆಚ್ಆರ್ಎಗೆ ಚುನಾವಣೆ ನಡೆಯಿತು. ಈಲ್ಲಾ ಹೋಟೆಲು ಸಂಘಗಳಿಗೆ ಕೂಡಾ ಬದಲಾವಣೆ ಬೇಕು ಎಂದು ಅನಿಸಿತ್ತು. ಅನೇಕ ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಮಿತ್ರರ ಅಭಿಪ್ರಾಯದಡಿಯಲ್ಲಿ ನಡೆಸಿದ ಈ ಪ್ರಯತ್ನಕ್ಕೆ ಯಶಸ್ಸು ಸಿಕ್ಕಿತು. ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಬದಲಾವಣೆ ಆಯಿತು.

ಈಗ ಮತ್ತೊಮ್ಮೆ ಅದೇ ಅನಿವಾರ್ಯತೆ ಸಂಭವಿಸಿದೆ. ಕಳೆದ ಮೂರು ವರ್ಷಗಳಲ್ಲಿ ಸಂಘದ ಕಾರ್ಯಚಟುವಟಿಕೆಗಳು ಸದಸ್ಯರ ಮನಗೆಲ್ಲುವಲ್ಲಿ ಯಶಸ್ಸಾಗಿಲ್ಲ. ಸಹಜವೇ. ಹತ್ತು ಕೆಲಸಗಳನ್ನು ಒಬ್ಬನೇ ಮಾಡುತ್ತೇನೆಂದರೆ ಎಲ್ಲವೂ ಅರ್ಥವೇ. ಡಿಸ್ಟಿಂಕ್ಷನ್ ಪಡೆಯಬೇಕಾದರೆ ಏಕಾಗ್ರತೆಯಿಂದ ಓದಬೇಕು. ಒಂದೇ ಕಡೆ ಮನಸ್ಸಿಡಬೇಕು.

ಕೆಪಿಹೆಚ್ಆರ್ ಅಧ್ಯಕ್ಷರಾದ ಮೈಸೂರಿನ ಶ್ರೀ ಎಂ.ರಾಜೇಂದ್ರ ಅವರು ಸೇವಾಚಟುವಟಿಕೆಯಲ್ಲಿ ಆಸಕ್ತರೇ. ಅವರಿಗೆ ವಯಸ್ಸೂ ಇದೆ. ಹಾಗೆಯೇ ಆರ್ಥಿಕವಾಗಿ ಅನುಕೂಲಸ್ಥರೂ ಕೂಡಾ. ದಾನಧರ್ಮಾದಿಗಳಲ್ಲಿ ಇಚ್ಛಾಶಕ್ತಿಯನ್ನು ಹೊಂದಿರುವವರೂ ಹೌದು. ಆದರೆ ಕೆಪಿಹೆಚ್ಆರ್ಎ ಕೇಂದ್ರ ಕಚೇರಿ ಇರುವುದು ಬೆಂಗಳೂರು ಮಹಾನಗರದಲ್ಲಿ, ರಾಜೇಂದ್ರ ಅವರಿರುವುದು ಮೈಸೂರಿನಲ್ಲಿ. ಒಂದು ಸಣ್ಣ ಕೆಲಸಕ್ಕಾಗಿಯೂ ಮೈಸೂರಿನಿಂದ ಬೆಂಗಳೂರಿಗೆ ಬರುವುದೆಂದರೆ ಒಂದು ದಿನಪೂರ್ಣ ಕೆಲಸ.ಜಿದೇ ಸಮಯವನ್ನು ಉದ್ಯಮದ ಕಡೆಗೋ, ರಾಜಕೀಯದ ಕಡೆಗೋ ಮೈಸೂರಿನಲ್ಲಿದ್ದುಕೊಂಡು ನೀಡಿದಲ್ಲಿ ಹೆಚ್ಚೇ ಸಾಧನೆ ಮಾಡಬಹುದು.

ರಾಜೇಂದ್ರ ಅವರು ಕೆಪಿಹೆಚ್ಆರ್ಎ ಅಲ್ಲದೆ ಇನ್ನಿತರ ಹಲವು ಸಂಘ–ಸಂಸ್ಥೆಗಳಲ್ಲೂ ಪದಾಧಿಕಾರಿಗಳು. ಮೈಸೂರು ಜಿಲ್ಲಾ ಭಾರತೀಯ ಜನತಾ ಪಕ್ಷದ ಉಪಾಧ್ಯಕ್ಷರು, ಮೈಸೂರಿನ ಪ್ರಸಿದ್ಧ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಗಳ ದತ್ತ ಪೀಠದ ನಿರ್ದೇಶಕರು. ಇವಲ್ಲದೆ ಇನ್ನಿರ ಹತ್ತು ಹೊಣೆಗಾರಿಕೆಗಳನ್ನು ಹೊತ್ತುಕೊಂಡವರು. ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಸದಾ ವ್ಯಸ್ತರಾಗಿರುವ ರಾಜೇಂದ್ರರಿಗೆ ಕೆಪಿಹೆಚ್ಆರ್ಎಯ ಹೊಣೆಗಾರಿಕೆ ಸಮರ್ಥವಾಗಿ ನಿಭಾಯಿಸಲು

ಸಾಧ್ಯವಾಗಲಿಲ್ಲ ಎಂಬ ಅಸಮಾಧಾನ ಅನೇಕ ಸದಸ್ಯರಲ್ಲಿತ್ತು. ಅದಕ್ಕೆ ಅವರ ಹತ್ತು ಹಲವು ಕಾರ್ಯಭಾರಗಳ ಹೊಣೆಗಾರಿಕೆಗಳ ಒತ್ತಡವೇ ಕಾರಣಎನ್ನುವುದು ಬೇರೆ ಮಾತು.

ರಾಜಕೀಯ ಪಕ್ಷದಲ್ಲಿ ಸಕ್ರಿಯವಾಗಿದ್ದುಕೊಂಡು ಇನ್ನಿತರ ಕಾರ್ಯಭಾರಗಳಿಗೆ ಗಮನ ಕೊಡುವುದಾಗಲೀ ಸಮಯ ಕೊಡುವುದಾಗಲೀ ಸುಲಭದ ಮಾತಲ್ಲವೆನ್ನುವುದು ಯಾರಿಗೂ ತಿಳಿಯದ ಸಂಗತಿಯೇನಲ್ಲ. ಇನ್ನು ರಾಜಕೀಯ ಪಕ್ಷದ ಕೆಲಸವನ್ನು ನಿರ್ಲಕ್ಷ್ಯ ಮಾಡುವುದೂ ಸಾಧ್ಯವಿಲ್ಲ. ಸಂಘದ ಕೆಲಸ ಎಂದು ಇಲ್ಲಿ ಬಂದು ಕುಳಿತರೆ ಮೈಸೂರಿನ ಜಿಲ್ಲಾ ಮಟ್ಟದಲ್ಲಿ ರಾಜಕೀಯ ಕೆಲಸಗಳನ್ನು ನಿರ್ಲಕ್ಷಿಸ ಬೇಕಾಗುತ್ತದೆ. ಅಲ್ಲಿ ಅವರು ಉತ್ತಮವಾಗಿ ಸಾಧನೆ ಮಾಡುತ್ತಲೂ ಇದ್ದಾರೆ. ಅದು ಅವರ ರಾಜಕೀಯ ಭವಿಷ್ಯದ ಪ್ರಶ್ನೆಯೂ ಹೌದು. ಅವರ ರಾಜಕೀಯ ಭವಿಷ್ಯ ಉಜ್ವಲವಾಗಲಿ ಎಂದು ಹಾರೈಸುತ್ತಾ ಅವರನ್ನು ಅಭಿನಂದಿಸೋಣ.

ಸಂಘದಲ್ಲಿ ಎಲ್ಲ ರಾಜಕೀಯ ಪಕ್ಷದ ಬೆಂಬಲಿಗರೂ ಇರುತ್ತಾರೆ. ಇಲ್ಲಿ ಯಾವುದೇ ಒಂದು ರಾಜಕೀಯ ಪಕ್ಷದ ವಿಶೇಷ ಜವಾಬ್ದಾರಿ ಹೊತ್ತವರು ಉನ್ನತ ಸ್ಥಾನಮಾನ ಹೊಂದಿದರೆ ಸಂಗದೊಳಗೆ ಪರವಿರೋಧಗಳು ಹುಟ್ಟುವುದು ಖಚಿತ. ಇದರಿಂದ ಸಂಘದ ಕಾರ್ಯಸೂಚಿಗೆ ಧಕ್ಕೆಯಾಗುತ್ತದೆ. ಕಾರ್ಯಾಚರಣೆಗೆ ಅಡ್ಡಿಯುಂಟಾಗುತ್ತದೆ. ವಿರೋಧಪಕ್ಷದ್ದೇ ಸರಕಾರವಿದ್ದಲ್ಲಿ ಸಂಘದ ಮತ್ತು ಉದ್ಯಮದ ಪರ ಕೆಲಸಗಳು ಆಗುವುದೇ ಇಲ್ಲ. ನಿಷ್ಪಕ್ಷಪಾತಿಗಳೇ ಪದಾಧಿಕಾರದಲ್ಲಿದ್ದರೆ ಸಂಘಕ್ಕೆ ನಿರಾತಂಕ.

ಸಂಘಕ್ಕೆ ಸಂಘದ್ದೇ ಆದ ಒಂದು ಬೈಲಾ ಇರುತ್ತದೆ. ಬೈಲಾ ಪ್ರಕಾರವೇ ಸಂಘದ ಕಾರ್ಯಕ್ರಮಗಳು ನಡೆಯಬೇಕು. ಕೆಪಿಹೆಚ್‌ಆರ್ ಎ ಎಂದರೆ ರಾಜ್ಯಕ್ಕೊಂದೇ ಸಂಘ, ಅದು ಕೇವಲ ಬೆಂಗಳೂರಿನದ್ದಲ್ಲ, ಅಥವಾ ಯಾವುದೇ ಒಂದು ಜಿಲ್ಲೆಯದ್ದಲ್ಲ. ಎಲ್ಲ ಜಿಲ್ಲೆಗಳ ಸಂಘಗಳು ಸಂಯೋಜಿತವಾಗಿರುವ ಒಂದು ರಾಜ್ಯ ಮಟ್ಟದ ಸಂಘವಿದು. ಹಾಗೆಂದು ಬೆಂಗಳೂರಿನಲ್ಲಿ ಕುಳಿತೇ ಒಂದು ನಿರ್ಧಾರ ತೆಗೆದುಕೊಳ್ಳುವು ದಕ್ಕೆ ಸಾಧ್ಯವಿಲ್ಲ. ಎಲ್ಲ ಜಿಲ್ಲೆಗಳ ಸಂಘಗಳ ಅಭಿಪ್ರಾಯ ತೆಗೆದುಕೊಂಡೇ ನಿರ್ಧಾರ ತೆಗೆದುಕೊಳ್ಳ ಬೇಕಾಗುತ್ತದೆ. ಅದಕ್ಕಾಗಿಯೇ ಪ್ರತಿ ತಿಂಗಳೂ ಕಾರ್ಯಕಾರಿ ಸಮಿತಿಯ ಸಭೆ ನಡೆಸುವುದು. ಸಮಿತಿಯಲ್ಲಿ ಎಲ್ಲ ಜಿಲ್ಲೆಗಳಿಂದ ಎರಡೆರಡು ಮಂದಿ ಪ್ರತಿನಿಧಿಗಳು ಇರುತ್ತಾರೆ.

ಜಿಲ್ಲೆಗಳಿಗೆ ಹೆಚ್ಚು ಪ್ರತಿನಿಧಿತ್ವ ಬೇಕು ಎಂದು ಹಲವರ ಅಪೇಕ್ಷೆ ಇದೆ. ಹೆಚ್ಚು ಪ್ರತಿನಿಧಿತ್ವ ನೀಡಬೇಕಾದರೆ ಈ ವಿಷಯವನ್ನು ಕಾರ್ಯಕಾರಿ ಸಮಿತಿಯಲ್ಲಿ ಅನುಮೋದನೆ ಪಡೆದು, ಬಳಿಕ ವಿಶೇಷ ಸರ್ವಸದಸ್ಯರ ಸಭೆ ನಡೆಸಿ ಅಲ್ಲಿ ವಿಷಯ ಮಂಡನೆ ಮಾಡಿ ಸಮ್ಮತಿ ಪಡೆದಾದ ಬಳಿಕ ಈ ವಿಷಯವನ್ನು ಬೈಲಾದಲ್ಲಿ ಸೇರ್ಪಡೆಗೊಳಿಸಬಹುದು.

ಈಲ್ಲಾ ಸಂಘಗಳಿಗೆ ಹೆಚ್ಚಿನ ಪ್ರತಿನಿಧಿತ್ವ ನೀಡಬೇಕೆನ್ನುವುದರಲ್ಲಿ ಎರಡು ಮಾತಿಲ್ಲ. ಕೆಪಿಹೆಚ್‌ಅರ್‌ಎ ಸಭೆಗಳು ಕೂಡಾ ಪ್ರತಿತಿಂಗಳು ಬೇರೆ ಬೇರೆ ಜಿಲ್ಲೆಗಳಲ್ಲಿ ನಡೆಸಿದರೆ ಉತ್ತಮ. ಇದರಿಂದ ಅಲ್ಲಿನ ಸಮಸ್ಯೆಗಳನ್ನು ಅರಿಯುವುದಕ್ಕೆ ಸಾಧ್ಯ. ಸಮಸ್ಯೆಗಳನ್ನು ತಿಳಿಯುವುದಕ್ಕೇ ಸಭೆ ನಡೆಸಿ ಪ್ರಯೋಜನವಿಲ್ಲ. ಪರಿಹಾರಗಳನ್ನೂ ಕಂಡುಕೊಳ್ಳುವ ಪ್ರಯತ್ನಗಳನ್ನೂ ಮಾಡಿದರೆ ಮಾತ್ರವೇ ಸಂಘದ ಮತ್ತು ಸಭೆಯ ಉದ್ದೇಶಗಳು ಸಾರ್ಥಕವಾಗುತ್ತವೆ. ಸಮಸ್ಯೆ ಕೇಳಿ ಧೈರ್ಯ ತುಂಬುವುದರಲ್ಲಿ ಯಾವುದೇ ಕೆಲಸವೂ ಆಗುವುದಿಲ್ಲ. ಹೋಟೆಲು ಉದ್ಯಮಕ್ಕೆ ಬರುವವರೆಲ್ಲ ಧೈರ್ಯವಂತರೆ. ತಳಮಟ್ಟದಿಂದ ಈ ಉದ್ಯಮಕ್ಕೆ

ಬಂದಿರುವವರು ಹೆಚ್ಚೇ ಧೈರ್ಯವಂತರು. ಇನ್ನು ಹೋಟೆಲು ಉದ್ಯಮದಲ್ಲಿ ಅದೃಷ್ಟವಂತರು, ಪುಣ್ಯವಂತರು, ಧನವಂತರು, ಮಾನವಂತರು ಇದ್ದಾರೆ. ಎಲ್ಲ ಇರುವ ಕಾರಣವೇ ಹೋಟೆಲು ಉದ್ಯಮದಲ್ಲಿ ಸಾಧನೆ ಮಾಡುವ ಉದ್ಯಮಿ ಒಂದು ಪಿಹೆಚ್‌ಡಿ ಮಾಡುವಷ್ಟು ಅನುಭವ ಹೊಂದಿರುತ್ತಾನೆ.

ಬೇರೆಲ್ಲ ಉದ್ಯಮಗಳಲ್ಲಿ ರಾತ್ರಿ ಅಂಗಡಿ ಅಥವಾ ಕಚೇರಿ ಬಾಗಿಲು ಹಾಕಿದ ಮೇಲೆ ಕೆಲಸಗಾರರನ್ನೆಲ್ಲ ಮನೆಗೆ ಕಳಿಸಿ ಮಾಲೀಕನೂ ಮನೆಗೆ ಹೋಗಿ ನೆಮ್ಮದಿಯ ನಿದ್ದೆ ಮಾಡುತ್ತಾನೆ. ಆದರೆ ಹೋಟೆಲು ಉದ್ಯಮದಲ್ಲಿ ಕೆಲಸಗಾರರನ್ನು ಮನೆಗೆ ಕಳಿಸುವ ಪ್ರಶ್ನೆಯಿಲ್ಲ. ಕೆಲಸಗಾರರಿಗೆ ಹೋಟೆಲಿನಲ್ಲೇ ಊಟ, ಬಟ್ಟೆ, ವಸತಿ ಎಲ್ಲ. ಕೆಲಸಗಾರರು ಊಟಮಾಡಿದರೋ, ನಿದ್ದೆ ಮಾಡಿದರೋ ಎಂದು ಯೋಚಿಸುತ್ತಾ ಮಾಲೀಕನು ಮನೆಗೆ ಮಲಗಿದರೂ ನಿದ್ದೆ ಬರುವುದೇ ಇಲ್ಲ. ಇಲ್ಲಿಗೆ ಬರುವ ಕಾರ್ಮಿಕರಲ್ಲೂ ಅನೇಕರು ವಿದ್ಯಾವಂತರೂ, ಕೆಲಸ ಗೊತ್ತಿಲ್ಲದವರೂ ಇರುತ್ತಾರೆ. ಅವರಿಗೆ ತರಬೇತಿ ನೀಡಿ ಕೆಲಸಕ್ಕೆ ತೊಡಗಿಸುವುದೂ ತಲೆಬಿಸಿಯ ಕೆಲಸವೇ.

ಬೆಂಗಳೂರಿನಲ್ಲೇ ಹತ್ತು ಹಲವು ಸಮಸ್ಯೆಗಳಿರುವಾಗ ಇನ್ನು ತಾಲ್ಲೂಕು, ಜಿಲ್ಲಾ ಮತ್ತು ಹೋಬಳಿ ಮಟ್ಟದಲ್ಲಿ ಪರಿಸ್ಥಿತಿ ಹೇಗಿರಬಹುದೆಂದು ಊಹಿಸಲೂ ಅಸಾಧ್ಯ. ಆದ್ದರಿಂದ ಕೆಪಿಹೆಚ್‌ಎಯು ಬೆಂಗಳೂರಿಗಿಂತ ಹೆಚ್ಚಿನ ಗಮನವನ್ನು ಇತರ ಜಿಲ್ಲೆ–ತಾಲ್ಲೂಕುಗಳ ಹೋಟೆಲುಗಳ ಸಂಘಗಳ ಸಮಸ್ಯೆಗಳತ್ತ ನೀಡುವ ಅಗತ್ಯವಿದೆ.

ದಿನಕ್ಕೊಂದು ಹೊಸ ಕಾನೂನು, ರಾಜ್ಯದ್ದು, ಕೇಂದ್ರದ್ದು ಬೇರೆ ಬೇರೆ, ದರಪೈಪೋಟಿ, ಕಾಮಿಕರ ಕೊರತೆ, ಸರ್ಕಾರದ ಮತ್ತು ಸಾರ್ವಜನಿಕರ ಕಣ್ಣು, ಒಟ್ಟಾರೆಯಾಗಿ ಹೋಟೆಲು ಉದ್ಯಮದ ವಿರುದ್ಧವಾದ ಪರಿಸ್ಥಿತಿ ಸಮಾಜದಲ್ಲಿ ನೆಲೆಸಿದೆ.

ಇಂತಹ ಪರಿಸ್ಥಿತಿಯಲ್ಲೂ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಜಿಎಸ್‌ಟಿ ಮತ್ತು ಕನಿಷ್ಠ ವೇತನದ ವಿಷಯದಲ್ಲಿ ಆಗಿರುವ ಸಮಸ್ಯೆಗಳ ನಿವಾರಣೆಯ ಪ್ರಯತ್ನದಲ್ಲಿ ಬೃಹತ್ ಬೆಂಗಳೂರು ಹೋಟೆಲುಗಳ ಸಂಘವು ಯಶಸ್ಸನ್ನು ದಾಖಲಿಸಿದೆ. ಇದರ ಪ್ರಯೋಜನ ಕೇವಲ ಬೆಂಗಳೂರಿನ ಹೋಟೆಲು ಉದ್ಯಮದಾರರಿಗಷ್ಟೇ ಆಗಿರುವುದಲ್ಲ. ಕೆಪಿಹೆಚ್‌ಆರ್‌ಎಯ ಸಮಸ್ತ ಸದಸ್ಯರಿಗೆಲ್ಲದೆ ರಾಜ್ಯದ ಸಮಸ್ತ ತಾರಾ ಹೋಟೆಲುಗಳಿಂದ ಸಣ್ಣ ಮಧ್ಯಮ ಹೋಟೆಲು ಉದ್ಯಮದಾರರಿಗೆಲ್ಲರಿಗೂ ಪ್ರಯೋಜನವಾಗಿದೆ ಎಂಬುದು ಉಲ್ಲೇಖನೀಯ. ಈ ಪ್ರಯತ್ನಗಳ ಯಶಸ್ಸು ಬೃಹತ್ ಬೆಂಗಳೂರು ಹೋಟೆಲುಗಳ ಸಂಘದತ್ತ ದೇಶದ ಗಮನ ಸೆಳೆಯಿತು.

ಸರಕಾರ ಕಾನೂನು ಏನೇ ಇದ್ದರೂ ಹಣ ಕೊಟ್ಟು ಎಲ್ಲ ಸರಿಮಾಡಿಕೊಳ್ಳಬಹುದೆಂದು ಯಾರಾದರೂ ಹೇಳಬಹುದು. ಅಂತಹವರಿಗೆ ಅನುಭವ ಕಡಿಮೆ ಎನ್ನದೆ ವಿಧಿಯಿಲ್ಲ. ಮುಂದೆ ಕ್ಯಾಶ್‌ಲೆಸ್ ವ್ಯಾಪಾರದ ಕಾಲ ಬರುವಾಗ ಕ್ಯಾಶ್ ಇಟ್ಟುಕೊಂಡು ವ್ಯಾಪಾರ ಮಾಡುವವನಿಗೆ ಬೆಲೆ ಇಲ್ಲ. ಬದಲಾದ ಕಾಲಕ್ಕೆ ಸರಿಯಾಗಿ ಬದಲಾದ ವ್ಯವಸ್ಥೆಯನ್ನು ಅಳವಡಿಸಿಕೊಂಡು ಜನ ಮೆಚ್ಚುವ ರೀತಿಯಲ್ಲಿ ಹೋಟೆಲು ನಡೆಸಿದರೆ, ಸರಕಾರಕ್ಕೆ ಸಲ್ಲಬೇಕಾದ ನ್ಯಾಯೋಚಿತ ತೆರಿಗೆ ಪಾವತಿಸಿದರೆ, ನಮ್ಮದೇ ಬ್ರಾಂಡ್ ಸಿದ್ಧಪಡಿಸಿ ಉತ್ತಮ ದರವಿಟ್ಟು ವ್ಯಾಪಾರ ಮಾಡಿದರೆ ಇತ್ತೀಚೆಗಿನ ತಂತ್ರಜ್ಞಾನ ಬಳಸಿ ಶುಚಿರುಚಿಯ ಸೇವೆ ನೀಡಿದರೆ ಉದ್ಯಮದಲ್ಲಿ ಯಶಸ್ಸು ಸಾಧಿಸಬಹುದು.

ಮುಂದಿನ ಪೀಳಿಗೆಗೆ ಯುವ ಸಮುದಾಯಕ್ಕೆ ಹೋಟೆಲು ಉದ್ಯಮವನ್ನು ಮುಂದುವರಿಸಲು ಪ್ರೋತ್ಸಾಹ ಮತ್ತು ಮಾರ್ಗದರ್ಶನ ನೀಡಿದಲ್ಲಿ ಅವರು ಖಂಡಿತವಾಗಿ ಹೋಟೆಲು ಉದ್ಯಮದ ಚಹರೆಯನ್ನೇ ಬದಲಾಯಿಸಬಲ್ಲರು. ಈ ಕೆಲಸ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಹೋಟೆಲು ಸಂಘಗಳ ವತಿಯಿಂದಲೂ ನಡೆಸಿದಲ್ಲಿ ರಾಜ್ಯದ ಹೋಟೆಲು ಉದ್ಯಮಕ್ಕೆ ಹೊಸ ಆಯಾಮ ತರುವುದು ಸಾಧ್ಯವಿದೆ.

ಬೆಂಗಳೂರು ಮಹಾನಗರದ ಹೋಟೆಲು ಉದ್ಯಮದ ಸಮಸ್ಯೆಗಳೇ ಬೇರೆ, ಇತರ ಜಿಲ್ಲೆಗಳದೇ ಬೇರೆ. ಈ ಉದ್ಯಮ ತೊರೆದು ಬೇರಾವುದೇ ಉದ್ಯಮಕ್ಕೆ ಹೋದರೂ ಸಮಸ್ಯೆ ತಪ್ಪಿದ್ದಲ್ಲ. ಆದ್ದರಿಂದ ಕೆಪಿಹೆಚ್‌ಆರ್‌ಎಯ ಎಲ್ಲ ಸದಸ್ಯರಲ್ಲಿ ಪ್ರಾರ್ಥಿಸುವುದೇನೆಂದರೆ ನಾವೆಲ್ಲರೂ ಕೈಜೋಡಿಸಿ ಕೆಪಿಹೆಚ್‌ಆರ್‌ಎ ಯನ್ನು ಬಲವಾಗಿ ಕಟ್ಟಿ ಬೆಳೆಸೋಣ. ಸಂಘವು ಯಾವ ರೀತಿ ಕಾರ್ಯಾಚರಿಸಬೇಕು ಎಂಬ ವಿಚಾರದಲ್ಲಿ ನಿಮ್ಮ ಸಲಹೆ ಸೂಚನೆಗಳು ಅಗತ್ಯವಿದೆ.

ಬೃಹತ್ ಬೆಂಗಳೂರು ಹೋಟೆಲುಗಳ ಸಂಘದ ಬಗ್ಗೆಯಂತೂ ಸಂಘದ ಸದಸ್ಯರಲ್ಲಿ ಉತ್ತಮ ಅಭಿಮತವಿದೆ. ಸರಕಾರದ ಮಟ್ಟದಲ್ಲಿಯಾಗಲೀ ಅಥವಾ ಇತರ ಇಲಾಖೆಗಳ ಮಟ್ಟದಲ್ಲಿಯಾಗಲೀ ಯಾವುದೇ ಕೆಲಸ ಆಗಬೇಕಾದರೂ ಆಗದೆನ್ನುವ ಪ್ರಶ್ನೆಯೇ ನಮ್ಮ ಸಂಘದಲ್ಲಿಲ್ಲ.

ಜಿಎಸ್‌ಟಿ ವಿಚಾರದಲ್ಲಿ ಸಂಘದ ಪದಾಧಿಕಾರಿಗಳು ಕೇಂದ್ರ ಸರಕಾರದ ವಿವಿಧ ಮಂತ್ರಿಗಳ ಮತ್ತು ಅಧಿಕಾರಿಗಳ ಭೇಟಿಗಾಗಿ ಹಲವು ಬಾರಿ ದಿಲ್ಲಿಗೆ ಹೋಗಿ ಬಂದಿದ್ದೇವೆ. ಯಾವುದೇ ಖರ್ಚನ್ನೂ ಸಂಘಕ್ಕೆ ಹಾಕಿಲ್ಲ. ನಿಸ್ವಾರ್ಥವಾಗಿ ಕೆಲಸ ಮಾಡಿದ್ದೇವೆ. ಯಶಸ್ಸು ಪಡೆದಿದ್ದೇವೆ.

ಮುಂದೆ ಆಹಾರ ಸುರಕ್ಷಾ ಕಾಯಿದೆಯ ಸಮಸ್ಯೆ ಎದುರಾಗುವ ನಿರೀಕ್ಷೆ ಇದೆ. ಅದಕ್ಕಾಗಿ ಹೋರಾಟ ಮಾಡುವ ಅನಿವಾರ್ಯತೆ ಇದೆ. ಇದಲ್ಲದೆ ಯಾವುದೇ ವಿಚಾರ ಹೋಟೆಲು ಉದ್ಯಮಕ್ಕೆ ಮಾರಕವಾದದ್ದಿದ್ದರೆ ಅದರ ಹೋರಾಟ ನಡೆಸುವುದಕ್ಕೆ ನಾವು ಬದ್ಧರಿದ್ದೇವೆ. ಯಾವುದೇ ಸಮಸ್ಯಾತ್ಮಕ ಕಾಯಿದೆಯನ್ನೂ ಅನಿವಾರ್ಯವೆಂಬಂತೆ ಸ್ವೀಕರಿಸುವುದೂ ಇಲ್ಲ, ಹಣಕೊಟ್ಟು ಸರಿಮಾಡಿಕೊಳ್ಳ ಬಹುದೆನ್ನುವ ಸ್ವಭಾವವೂ ನಮ್ಮದಲ್ಲ. ಸಮಸ್ತ ಹೋಟೆಲು ಉದ್ಯಮದ ಹಿತಕ್ಕಾಗಿ ಹೋರಾಟವೇ ನಮ್ಮ ಧ್ಯೇಯ.

ಮುಂದಿನ ಮೂರು ವರ್ಷಗಳಲ್ಲಿ ಕೆಪಿಹೆಚ್‌ಆರ್‌ಎಯಲ್ಲಿ ಖಂಡಿತವಾಗಿ ಬಹಳ ಬದಲಾವಣೆ ತರುವ ಆಶಯದ ಕಾರ್ಯಸೂಚಿ ನಮ್ಮಲ್ಲಿದೆ. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಹೋಟೆಲು ಉದ್ಯಮದಲ್ಲಿ ಯಾವುದೇ ಸಮಸ್ಯೆ ಇದ್ದಲ್ಲಿ ನಮ್ಮಲ್ಲಿ ತಕ್ಷಣ ಸ್ಪಂದಿಸುವ ತಂಡವಿದೆ. ನಮ್ಮ ಸಂಖ್ಯೆಗೆ ನೀವು ಸಂಪರ್ಕಿಸಿದಲ್ಲಿ ಅಥವಾ ಸಂದೇಶವನ್ನು ಕಳಿಸಿದಲ್ಲಿ ಖಂಡಿತಾ ಸಮಸ್ಯೆ ಪರಿಹರಿಸಲು ನಾವು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ.

**ರಾಜ್ಯದ ಸಮಸ್ತ ಹೋಟೆಲು ಉದ್ಯಮದಾರರು**
**ಸಂಘದ ಸದಸ್ಯರಾಗಿ ಸಂಘವನ್ನು ಬಲಗೊಳಿಸಿ**
**ಬೆಳೆಸಿ ಉದ್ಯಮವನ್ನು ಪ್ರಗತಿ ಪಥದಲ್ಲಿ ಮುನ್ನಡೆಸಲು**
**ಕೈಗೂಡಿಸಬೇಕೆಂದು ನಮ್ರವಿನಂತಿ.**

# ತರಬೇತಿ ಕಾರ್ಯಾಗಾರ

ಬೆಂಗಳೂರು: ಕೆಂಪೇಗೌಡ ರಸ್ತೆಯಲ್ಲಿರುವ ಕರ್ನಾಟಕ ವಾಣಿಜ್ಯೋದ್ಯಮ ಮಂಡಳಿಯ ಕಾರ್ಯಾಲಯದಲ್ಲಿ 17–4–2018ರಂದು ಅಪ್ರೆಂಟಿಸ್‌ಶಿಪ್ ತರಬೇತಿ ಮತ್ತು ಕನಿಷ್ಠ ವೇತನ ನಿಯಮಾವಳಿಗಳ ಕುರಿತು ಹೋಟೆಲು ಉದ್ಯಮಿಗಳಿಗಾಗಿ ತಿಳಿವಳಿಕೆ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ಬೃಹತ್ ಬೆಂಗಳೂರು ಹೋಟೆಲುಗಲ ಸಂಘದ ಉಪಾಧ್ಯಕ್ಷ ಶ್ರೀ ಪಿ.ಸಿ.ರಾವ್, ಖಜಾಂಚಿ ಶ್ರೀ ವೀರೇಂದ್ರ ಎನ್.ಕಾಮತ್, ಶ್ರೀ ಕೆ.ವಿ ಅಶ್ವತ್ಥನಾರಾಯಣ್ ಹಗೂ ಇತರ ಅನೇಕ ಸದಸ್ಯರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

# ಚುನಾವಣಾ ಪೂರ್ವ ಸಮಾವೇಶ



ಬೆಂಗಳೂರು: ಕರ್ನಾಟಕ ವಿಧಾನಸಭಾ ಚುನಾವಣೆಯ ಹಿನ್ನಲೆಯಲ್ಲಿ ಕೇಂದ್ರ ಸಚಿವರಾದ ಶ್ರೀ ಅನಂತಕುಮಾರ್ ಮತ್ತು ಪದ್ಮನಾಭನಗರ ಕ್ಷೇತ್ರದ ಭಾರತೀಯ ಜನತಾ ಪಕ್ಷದ ಅಭ್ಯರ್ಥಿ ಮಾಜಿ ಗೃಹ ಸಚಿವ ಶ್ರೀ ಆರ್. ಅಶೋಕ ಅವರು ಬನಶಂಕರಿ ಕೈಗಾರಿಕಾ ವಸಾಹತು ಸಮೀಪದ ಕೃಷ್ಣಾ ಗ್ರಾಂಡ್ ಹೋಟೆಲಿನಲ್ಲಿ ಹೋಟೆಲು ಉದ್ಯಮದಾರರೊಂದಿಗೆ ಸಂವಾದ ನಡೆಸಿದರು.

ಹೋಟೆಲು ಉದ್ಯಮದ ಮಾಲಿನ ಜಿಎಸ್‌ಟಿಯನ್ನು ಇಳಿಸುವಲ್ಲಿ ಶ್ರೀ ಅನಂತ ಕುಮಾರ್ ಅವರ ಸಹಕಾರವನ್ನು ಈ ಸಂದರ್ಭದಲ್ಲಿ ಉಲ್ಲೇಖಿಸಿದ ಬೃಹತ್ ಬೆಂಗಳೂರು ಹೋಟೆಲುಗಳ ಸಂಘದ ಅಧ್ಯಕ್ಷ ಶ್ರೀ ಬಿ. ಚಂದ್ರಶೇಖರ ಹೆಬ್ಬಾರರು, ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷಕ್ಕೆ ಬೆಂಬಲ ನೀಡಿದಲ್ಲಿ ಹೋಟೆಲು ಉದ್ಯಮಕ್ಕೆ ಇನ್ನಷ್ಟು ಸಹಾಯವಾದೀತು ಎಂದು ಹೇಳಿದರು.

ಭಾರತೀಯ ಜನತಾ ಪಕ್ಷವನ್ನು ಗೆಲ್ಲಿಸಿದಲ್ಲಿ ಕ್ಯಾಟರಿಂಗ್ ಉದ್ಯಮದ ಮೇಲಿನ ತೆರಿಗೆಯನ್ನೂ ಶೇ.18ರಿಂದ ಶೇ.5ಕ್ಕೆ ಇಳಿಸುವ ಭರವಸೆಯನ್ನು ಈ ಸಂದರ್ಭದಲ್ಲಿ ಅನಂತಕುಮಾರ್ ಅವರು ನೆರೆದ ಉದ್ಯಮದಾರರಿಗೆ ನೀಡಿದರು.

ರಾಜ್ಯದಲ್ಲಿ ಭಾರತೀಯ ಜನತಾ ಪಕ್ಷದ ಸರಕಾರ ಅಸ್ತಿತ್ವಕ್ಕೆ ಬಂದಲ್ಲಿ ಹೋಟೆಲು ಉದ್ಯಮ ಮತ್ತು ಪ್ರವಾಸೋದ್ಯಮದ ಪ್ರಗತಿಗೆ ಪೂರಕವಾದ ನೀತಿಗಳನ್ನು ಜಾರಿಗೊಳಿಸುವುದಾಗಿ ಶ್ರೀ ಆರ್.ಅಶೋಕ್ ಅವರು ಆಶ್ವಾಸನೆ ನೀಡಿದರು.

ವೇದಿಕೆಯಲ್ಲಿ ಬಸವನಗುಡಿ ಶಾಸಕ ಶ್ರೀ ರವಿಸುಬ್ರಹ್ಮಣ್ಯ, ಶ್ರೀ ಕೆಂಪೇಗೌಡ, ಸಂಘದ ಮಾಜಿ ಗೌರವಾಧ್ಯಕ್ಷ ಶ್ರೀ ಕೆ.ಎನ್.ವಾಸುದೇವ ಅಡಿಗ, ಉಪಾಧ್ಯಕ್ಷ ಶ್ರೀ ಪಿ.ಸಿ.ರಾವ್, ಮಾಧ್ಯಮ ಉದ್ಯಮಿ ಡಾ.ಬೇಳೂರು ರಾಘವೇಂದ್ರ ಶೆಟ್ಟಿ, ಶ್ರೀ ರಾಧಾಕೃಷ್ಣ ಅಡಿಗ ಮತ್ತಿತರರು ಉಪಸ್ಥಿತರಿದ್ದರು.

**IMPORTANT NOTICE**

**GST Department** have started conducting raids on Business premises to see if the **GSTIN No is visible on Sign board of the Business premises**. Please get it affixed on Signboard and on the front door of Office. Notice can be issued if the GSTIN No is not mentioned on Signboard and on Front door of Business primses **U/s 125 of CGST Act 2017 and the penalty under this Section can be upto 25,000/-.**

Don't ignore and share with others

# ಹೋಟೆಲು ನಾಮಫಲಕದಲ್ಲಿ ಜಿಎಸ್‌ಟಿ ಸಂಖ್ಯೆ ಕಡ್ಡಾಯ

ಬೆಂಗಳೂರು: ಹೋಟೆಲುಗಳ ನಾಮಫಲಕದಲ್ಲಿ ಹೋಟೆಲು ಉದ್ಯಮಕ್ಕೆ ಸಂಬಂಧಿಸಿದ ಜಿಎಸ್‌ಟಿ ಸಂಖ್ಯೆಯನ್ನು ಪ್ರದರ್ಶಿಸುವುದು ಕಡ್ಡಾಯವಾಗಿದ್ದು, ಒಂದೊಮ್ಮೆ ತೆರಿಗೆ ಅಧಿಕಾರಿಗಳು ಭೇಟಿ ನೀಡಿ ತನಿಖೆ ನಡೆಸುವ ವೇಳೆಯಲ್ಲಿ ನಾಮಫಲಕದಲ್ಲಿ ಜಿಎಸ್‌ಟಿ ಸಂಖ್ಯೆ ನಮೂದಿಸಿರದೇ ಇದ್ದರೆ 25,000 ರುಪಾಯಿಗಳ ವರೆಗೂ ದಂಡ ವಿಧಿಸುವ ಸಾಧ್ಯತೆ ಇದೆ.

# ಬೆಂಗಳೂರಿನಿಂದ ಕುಂದಾಪುರಕ್ಕೆ ರೈಲು ಸೌಲಭ್ಯ ವಿಸ್ತರಣೆಗೆ ಒತ್ತಾಯ

ಬೆಂಗಳೂರು: ಬೆಂಗಳೂರಿನಲ್ಲಿ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಹತ್ತು ಲಕ್ಷಕ್ಕಿಂತ ಹೆಚ್ಚು ಜನರಿದ್ದಾರೆ. ಆದ್ದರಿಂದ ಬೆಂಗಳೂರು ಮಂಗಳೂರು ಮಾರ್ಗದಲ್ಲಿ ಹೆಚ್ಚುವರಿಯಾಗಿ ಇನ್ನೆರಡು ರೈಲುಗಳನ್ನು ಹಾಕಿ ಅವುಗಳನ್ನು ಕುಂದಾಪುರದ ವರೆಗೆ ವಿಸ್ತರಿಸಿದರೆ ಇಲ್ಲಿಯ ಜನರಿಗೂ ಉಪಕಾರವಾಗುತ್ತದೆ. ಅಲ್ಲದೆ ಪ್ರವಾಸೋದ್ಯಮಕ್ಕೂ ಪ್ರಯೋಜನವಾಗುತ್ತದೆ. ಪ್ರಯಾಣ ಸುಗಮವಾಗುತ್ತದೆ. ಆರ್ಥಿಕ ವ್ಯವಸ್ಥೆಯೂ ಸುಧಾರಿಸುತ್ತದೆ ಎಂದು ಬೃಹತ್ ಬೆಂಗಳೂರು ಹೋಟೆಲುಗಳ ಸಂಘದ ಮಾಜಿ ಗೌರವಾಧ್ಯಕ್ಷ ಶ್ರೀ ಕೆ.ಎನ್.ವಾಸುದೇವ ಅಡಿಗರು ಹೇಳಿದ್ದಾರೆ. ಸಂಘದ ಕಾರ್ಯಾಲಯಕ್ಕೆ ಚುನಾವಣೆಯ ಹಿನ್ನಲೆಯಲ್ಲಿ ಭೇಟಿ ನೀಡಿದ್ದ ಮಲ್ಲೇಶ್ವರ ಕ್ಷೇತ್ರದ ಭಾರತೀಯ ಜನತಾ ಪಕ್ಷದ ಅಭ್ಯರ್ಥಿ ಡಾ. ಅಶ್ವತ್ಥನಾರಾಯಣ್ ಅವರೊಂದಿಗೆ ಮಾತುಕತೆ ವೇಳೆ ಅವರು ಈ ರೀತಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಹೋಟೆಲು ಉದ್ಯಮವನ್ನು ಇನ್ನಷ್ಟು ಪ್ರಗತಿಯ ದಾರಿಯಲ್ಲಿ ಮುನ್ನಡೆಸಲು ಹೋಟೆಲು ಮತ್ತು ಕ್ಯಾಟರಿಂಗ್ ಉದ್ಯಮ ತರಬೇತಿ ಸಂಸ್ಥೆಯ ಸ್ಥಾಪನೆಯ ಅಗತ್ಯವನ್ನು ಅವರು ಒತ್ತಿ ಹೇಳಿದರು.

ಹೋಟೆಲು ಉದ್ಯಮದ ಸಮಸ್ಯೆಗಳನ್ನು ಶಾಸನಸಭೆಗಳಲ್ಲಿ ಸಮರ್ಥವಾಗಿ ಪ್ರತಿನಿಧಿಸುವುದಕ್ಕೆ ವಿಧಾನಪರಿಷತ್ತಿನಲ್ಲಿ ಹೋಟೆಲು ಉದ್ಯಮಿಯೋರ್ವರನ್ನು ನಾಮಕರಣ ಮಾಡುವುದು ಅಗತ್ಯ ಎಂದು ಅವರು ಸಲಹೆ ನೀಡಿದರು.

# ಶ್ವೇತಾ ಎಂ. ಯುಪಿಎಸ್‌ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ 3ನೇ ರ್‍ಯಾಂಕ್



ಬೆಂಗಳೂರು: ಹೋಟೆಲು ಉದ್ಯಮದಾರರೂ, ಕೆಪಿಹೆಚ್‌ಆರ್‌ಎ ಮತ್ತು ಬೃಹತ್ ಬೆಂಗಳೂರು ಹೋಟೆಲುಗಳ ಸಂಘವೂ ಸೇರಿದಂತೆ ಹಲವಾರು ಸಂಘ ಸಂಸ್ಥೆಗಳ್ಲಿ ಸಕ್ರಿಯ ಸದಸ್ಯರೂ ಆಗಿರುವ ಶ್ರೀ ಜಿ.ಕೆ.ಸೋಮಯಾಜಿ ಮತ್ತು ಶ್ರೀಮತಿ ಗೀತಾ ಸೋಮಯಾಜಿ ದಂಪತಿಗಳ ಪುತ್ರಿ ಕುಮಾರಿ ಶ್ವೇತಾ ಎಂ. ಅವರು ಇತ್ತೀಚೆಗೆ ನಡೆದ ಯುಪಿಎಸ್‌ಸಿ ಪರೀಕ್ಷೆಯಲ್ಲಿ ದೇಶಕ್ಕೆ 119ನೇ ರ್‍ಯಾಂಕ್ ಮತ್ತು ರಾಜ್ಯ ಮಟ್ಟದಲ್ಲಿ ಮೂರನೇ ರ್‍ಯಾಂಕ್‌ಗಳಿಸಿ ಸಾಧನೆ ಮಾಡಿದ್ದಾರೆ.

ಪಿಯುಸಿಯಲ್ಲಿಯೂ ಅತ್ಯಧಿಕ ಅಂಕಗಳೊಂದಿಗೆ ತೇರ್ಗಡೆಯಾಗಿದ್ದ ಶ್ವೇತಾ ಸಿಇಟಿಯಲ್ಲಿ 21ನೇ ರ್‍ಯಾಂಕ್ ಗಳಿಸಿ ಬಿಎಂಎಸ್ ಕಾಲೇಜಿನಲ್ಲಿ ಇಂಜಿನಿಯರಿಂಗ್‌ನಲ್ಲಿ ಚಿನ್ನದ ಪದಕ ವಿಜೇತೆಯಾಗಿದ್ದಾರೆ.

2017ನೇ ಸಾಲಿನ ಕೇಂದ್ರ ಸಾರ್ವಜನಿಕ ಸೇವಾ ಆಯೋಗವು ನಡೆಸುವ ನಾಗರಿಕ ಸೇವಾ ಪರೀಕ್ಷೆಯಲ್ಲಿ ರ್‍ಯಾಂಕ್ ವಿಜೇತೆಯಾಗಿರುವ ಶ್ವೇತಾ ಹೆತ್ತವರಿಗೆ ಹೆಮ್ಮೆ ತಂದಿದ್ದಾರೆ.

ತಂದೆಯವರ ಹೋಟೆಲು ಉದ್ಯಮ ಆಡಳಿತ ಮತ್ತು ವ್ಯವಹಾರ ವಿಚಾರಗಳಲ್ಲಿ ಸಮರ್ಥವಾಗಿ ಸಹಕಾರ ನೀಡುತ್ತಿದ್ದ ಶ್ವೇತಾ ಎರಡು ವರ್ಷಗಳ ಕಾಲ ಸಂಸ್ಥೆಯೊಂದರಲ್ಲಿ ಉದ್ಯೋಗಿಯಾಗಿದ್ದು, ಬಳಿಕ ತಂದೆಯವರ ಪ್ರೇರಣೆಯಂತೆ ನಾಗರಿಕ ಸೇವಾ ಪರೀಕ್ಷೆಗಾಗಿ ಸ್ವತಃ ಅಧ್ಯಯನ ಮಾಡಿ ಸಾಧನೆಯನ್ನು ದಾಖಲಿಸಿದ್ದಾರೆ.

ಸಾರ್ವಜನಿಕ ಸೇವೆಯಲ್ಲಿ ಪ್ರಾಮಾಣಿಕತೆಯ ಸೇವೆ ಸಲ್ಲಿಸುವ ಉದ್ದೇಶ ತನ್ನದು. ಉದ್ಯಮ ಜಗತ್ತಿನ ನನ್ನ ತಂದೆಯವರ ಅನುಭವ ನನಗೆ ಸಾರ್ವಜನಿಕ ಕ್ಷೇತ್ರದಲ್ಲಿರುವ ಭ್ರಷ್ಟತೆಯ ಚಿತ್ರಣವನ್ನು ಸ್ಪಷ್ಟವಾಗಿಯೇ ನೀಡಿದೆ. ಸ್ವಲ್ಪಮಟ್ಟಿಗಾದರೂ ಅದನ್ನು ತೊಡೆಯಬೇಕು. ಜನತೆಗೆ ಉತ್ತಮ ಸೇವೆ ಸಲ್ಲಿಸಬೇಕೆಂಬ ಕನಸು ಶ್ವೇತಾರವರದಾಗಿದೆ. ಶ್ವೇತಾರವರ ಕನಸು ನನಸಾಗಲಿ, ನಾಗರಿಕ ಸೇವೆಯ ಉನ್ನತ ಹುದ್ದೆಯು ಅವರದಾಗಲಿ. ದೇಶಕ್ಕೆ ಉತ್ತಮ ಸೇವೆ ಸಲ್ಲಿಸುವ ಅವಕಾಶ ದೊರೆಯಲಿ ಎಂದು ಬೃಹತ್ ಬೆಂಗಳೂರು ಹೋಟೆಲುಗಳ ಸಂಘವು ಹಾರೈಸುತ್ತದೆ.



## ಅಭಿನಂದನೆ

ಯುಪಿಎಸ್‌ಸಿ ಪರೀಕ್ಷೆಯಲ್ಲಿ ರಾಜ್ಯಮಟ್ಟದಲ್ಲಿ 3ನೇ ರ್‍ಯಾಂಕ್ ಮತ್ತು ದೇಶಕ್ಕೆ 119ನೇ ರ್‍ಯಾಂಕ್ ಗಳಿಸಿರುವ ಕುಮಾರಿ ಶ್ವೇತಾ ಎಂ.( ಹೋಟೆಲು ಉದ್ಯಮಿ ಶ್ರೀ ಜಿ.ಕೆ. ಸೋಮಯಾಜಿ ಮತ್ತು ಶ್ರೀಮತಿ ಗೀತಾ ಸೋಮಯಾಜಿ ದಂಪತಿಗಳ ಪುತ್ರಿ) ಅವರನ್ನು ದಕ್ಷಿಣ ಕನ್ನಡ ಸನಾತನ ಧರ್ಮ ಸಂಘದ ವತಿಯಿಂದ ಇತ್ತೀಚೆಗೆ ಶ್ರೀ ಪ್ರಸನ್ನ ಕಲ್ಯಾಣ ಮಂದಿರದಲ್ಲಿ ನಡೆದ ಸಮಾರಂಭದಲ್ಲಿ ಅಭಿನಂದಿಸಲಾಯಿತು.

## ಎಫ್‌ಕೆಸಿಸಿಐ ನೂತನ ಅಧ್ಯಕ್ಷರಾಗಿ ಸುಧಾಕರ ಶೆಟ್ಟಿ



ಬೆಂಗಳೂರು: ಕರ್ನಾಟಕ ವಾಣಿಜ್ಯೋದ್ಯಮ ಮಂಡಳಿಯ ನೂತನ ಅಧ್ಯಕ್ಷರಾಗಿ ಮೈಸೂರು ಹೋಟೆಲು ಮಾಲೀಕರ ಸಂಘದ ಮಾಜಿ ಅಧ್ಯಕ್ಷರಾದ ಶ್ರೀಈ ಸುಧಾಕರ ಶೆಟ್ಟರು ಆಯ್ಕೆ ಯಾಗಿದ್ದಾರೆ. ಕೆಪಿಹೆಚ್‌ಆರ್‌ಎ ವತಿಯಿಂದ ಖಜಾಂಚಿಗಳಾದ ಶ್ರೀ ಪಿ.ಸಿ.ರಾವ್, ಉಪಾಧ್ಯಕ್ಷರಾದ ಶ್ರೀ ಜಿ.ಕೆ.ಶೆಟ್ಟಿ ಮತ್ತು ಬಿಬಿಹೆಚ್‌ಎ ಖಜಾಂಚಿಗಳಾದ ಶ್ರೀ ವೀರೇಂದ್ರ ಎನ್.ಕಾಮತ್ ಅವರುಗಳು ಶ್ರೀ ಸುಧಾಕರ ಶೆಟ್ಟರಿಗೆ ಹೂಗುಚ್ಛ ನೀಡಿ ಅಭಿನಂದಿಸಿದರು.

## ಶುಭವಿವಾಹ

ಶ್ರೀ ಅಡೂರು ಕೋಟೆಗದ್ದೆ ನಾರಾಯಣ ಅಡಿಗರು ಮತ್ತು ಶ್ರೀಮತಿ ರಾಜೇಶ್ವರೀ ಅಡಿಗರ ಸುಪುತ್ರ ಚಿ. ಭರತ್ ಅವರ ವಿವಾಹವು ಕಾರ್ಕಳ ಹೆಂಡಾಲು ಗ್ರಾಮದ ಶ್ರೀಮತಿ ಜಯಲಕ್ಷ್ಮಿ ಮತ್ತು ಶ್ರೀ ಅನಂತಕೃಷ್ಣ ಭಟ್ ದಂಪತಿಗಳ ಸುಪುತ್ರಿ ಚಿ.ಸೌ.ಅಪೇಕ್ಷಾ ಅವರೊಂದಿಗೆ 9–4–2018ನೇ ತಾರೀಖಿನಂದು ಬೆಂಗಳೂರಿನ ಜಯನಗರದ ಚಾಮರಾಜು ಕಲ್ಯಾಣ ಮಂದಿರದಲ್ಲಿ ನಡೆಯಿತು. ಅನೇಕ ಹಿತೈಷಿಗಳು, ಬಂಧುಮಿತ್ರರು ಭಾಗವಹಿಸಿ ವಧೂವರರನ್ನು ಹರಸಿದರು.

## ನಿಧನ

### ಪುಂಡರೀಕಾಕ್ಷ ಉಪಾಧ್ಯಾಯ

ಬೆಂಗಳೂರು : ಹಿರಿಯ ಹೋಟೆಲು ಉದ್ಯಮದಾರರಾಗಿದ್ದ ಶ್ರೀ ಪುಂಡರೀಕಾಕ್ಷ ಉಪಾಧ್ಯಾಯರು 16–4–2018ನೇ ಸೋಮವಾರದಂದು ಹೃದಯಾಘಾತದಿಂದ ನಿಧನಹೊಂದಿದರು. ಅವರಿಗೆ 78 ವರ್ಷ ವಯಸ್ಸಾಗಿತ್ತು. ಅವರು ಪತ್ನಿ, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು, ಅಪಾರ ಬಂಧುಬಳಗ ವನ್ನು ಅಗಲಿದ್ದಾರೆ. ಮೃತರ ಆತ್ಮಕ್ಕೆ ಶಾಂತಿ ದೊರೆಯಲೆಂದು ಮತ್ತು ಅವರ ಕುಟುಂಬಕ್ಕೆ ದುಃಖ ಸಹಿಸುವ ಶಕ್ತಿಯನ್ನು ಭಗವಂತನು ನೀಡಲೆಂದು ಪ್ರಾರ್ಥಿಸಿ ಬೃಹತ್ ಬೆಂಗಳೂರು ಹೋಟೆಲುಗಳ ಸಂಘವು ಶ್ರದ್ಧಾಂಜಲಿ ಸಲ್ಲಿಸಿದೆ.

### ಟಿ.ಪಿ.ಸುಬ್ರಹ್ಮಣ್ಯ ಭಾತ್ರ



ಬೆಂಗಳೂರು: ಹಿರಿಯ ಹೋಟೆಲು ಉದ್ಯಮದಾರರಾಗಿದ್ದ ಶ್ರೀ ಟಿ. ಪಿ. ನಾರಾಯಣ ಭಾತ್ರರವರು 2–4–2018ರಂದು ಹೃದಯಾಘಾತದಿಂದ ನಿಧನಹೊಂದಿದರು. ಅವರಿಗೆ 70 ವರ್ಷ ವಯಸ್ಸಾಗಿತ್ತು. ಅವರು ಪತ್ನಿ, ಓರ್ವ ಪುತ್ರಿ ಹಗೂ ಅಪಾರ ಬಂಧುಬಳಗವನ್ನು ಅಗಲಿದ್ದಾರೆ. ಮೃತರ ಆತ್ಮಕ್ಕೆ ಶಾಂತಿ ದೊರೆಯಲೆಂದು ಮತ್ತು ಅವರ ಕುಟುಂಬಕ್ಕೆ ದುಃಖ ಸಹಿಸುವ ಶಕ್ತಿಯನ್ನು ಭಗವಂತನು ನೀಡಲೆಂದು ಪ್ರಾರ್ಥಿಸಿ ಬೃಹತ್ ಬೆಂಗಳೂರು ಹೋಟೆಲುಗಳ ಸಂಘವು ಶ್ರದ್ಧಾಂಜಲಿ ಸಲ್ಲಿಸಿದೆ.

# ಬೃಹತ್ ಬೆಂಗಳೂರು ಹೋಟೆಲುಗಳ ಸಂಘ (ರಿ)

## ಹೋಟೆಲ್ ಉದ್ಯಮ

ಕರ್ನಾಟಕ ಸರ್ಕಾರದ ನೋಟಿಫಿಕೇಷನ್ ನಂ. **DES/SIP/PWX/01/2018 Dated.16.02.2018**

**And P & S/CPI/2016-17 DATED.01.03.2018**

**Cost of Living Allowance to be paid over and above 3944**

ಕಾಸ್ಟ್ ಆಫ್ ಲಿವಿಂಗ್ ಇಂಡೆಕ್ಸ್: 7106–6843–263 ಪಾಯಿಂಟ್ಸ್

ಮಿನಿಮಮ್ ವೇಜಸ್ ಮತ್ತು ವಿ.ಡಿ.ಎ. :– **from 01-04-2018 to 31.03.2019**

ಪ್ರಸಕ್ತ ವರ್ಷ (7106–6843)=263 **Points** ಹೆಚ್ಚಳ

# "ಷೆಡ್ಯೂಲ್"

| ಕ್ರ.ಸಂ. | ಕ್ಲಾಸ್ ಆಫ್ ಎಂಪ್ಲಾಯಮೆಂಟ್ | | ವಲಯ–ಎ | ವಲಯ–ಬಿ | ವಲಯ–ಸಿ |
|---|---|---|---|---|---|
| 1. | ಅಡಿಗೆಯವರು / ಸಿಹಿ ತಿಂಡಿ | ಬೇಸಿಕ್ | 11,830.00 | 11,570.00 | 10,790.00 |
| | | ವಿಡಿಎ | 1082.00 | 1082.00 | 1082.00 |
| | | ಮೊತ್ತ | 12,912.00 | 12,652.00 | 11,872.00 |
| 2. | ಸೂಪರ್‌ವೈಸರ್/ಅಡಿಗೆ ಮನೆ ಸೂಪರ್‌ವೈಸರ್ | ಬೇಸಿಕ್ | 11,050.00 | 11,440.00 | 10,660.00 |
| | | ವಿಡಿಎ | 1082.00 | 1082.00 | 1082.00 |
| | | ಮೊತ್ತ | 12,132.00 | 12,522.00 | 11,742.00 |
| 3. | ಬಾರಮನ್ | ಬೇಸಿಕ್ | 11,050.00 | 10,790.00 | 10,140.00 |
| | | ವಿಡಿಎ | 1082.00 | 1082.00 | 1082.00 |
| | | ಮೊತ್ತ | 12,132.00 | 11,872.00 | 11,222.00 |
| 4. | ಸಹಾಯಕ ಅಡಿಗೆಯವರು/ದೋಸೆ ಮಾಡುವವರು | ಬೇಸಿಕ್ | 10,660.00 | 10,400.00 | 9,660.00 |
| | ಚಪಾತಿ ಮಾಡುವವರು/ಇಡ್ಲಿ ಮಾಡುವವರು | ವಿಡಿಎ | 1082.00 | 1082.00 | 1082.00 |
| 5. | ರೂಂ ಬಾಯ್/ಸಹಾಯಕ ರೂಂ ಬಾಯ್ | ಮೊತ್ತ | 11,742.00 | 11,482.00 | 10,742.00 |
| 6. | ಕಾಫಿ ಮಾಡುವವರು/ಟೀ ಮಾಡುವವರು/ಸರ್ವರ್ | ಬೇಸಿಕ್ | 10,400.00 | 10,140.00 | 9,490.00 |
| | ಸಪ್ಲೈಯರ್/ವೇಟರ್/ಬೇರರ್/ಬಟ್ಲರ್/ಗ್ರೈಂಡರ್ | ವಿಡಿಎ | 1082.00 | 1082.00 | 1082.00 |
| | | ಮೊತ್ತ | 11,482.00 | 11,222.00 | 10,572.00 |
| 7. | ತರಕಾರಿ ಕಟ್ ಮಾಡುವವರು/ಮಾಂಸ ಕಟ್ | ಬೇಸಿಕ್ | 10,010.00 | 9,660.00 | 9,100.00 |
| | ಮಾಡುವವರು/ಪಾರ್ಸೆಲ್ ಬಾಯ್/ನೀರು ತರುವವ | ವಿಡಿಎ | 1082.00 | 1082.00 | 1082.00 |
| 8. | ಗಾರ್ಡನರ್ಸ್/ಧೋಬಿ | ಮೊತ್ತ | 11,092.00 | 10,742.00 | 10,182.00 |
| 9. | ಸ್ವಾಗತಗಾರ / | ಬೇಸಿಕ್ | 12,090.00 | 11,830.00 | 11,050.00 |
| | | ವಿಡಿಎ | 1082.00 | 1082.00 | 1082.00 |
| 10. | ಟೆಲಿಫೋನ್ ಆಪರೇಟರ್ | ಮೊತ್ತ | 13,172.00 | 12,912.00 | 12,132.00 |

| ಕ್ರ.ಸಂ. | ಕ್ಲಾಸ್ ಆಫ್ ಎಂಪ್ಲಾಯಮೆಂಟ್ | | ವಲಯ–ಎ | ವಲಯ–ಬಿ | ವಲಯ–ಸಿ |
|---|---|---|---|---|---|
| 11. | ಎಲೆಕ್ಟ್ರೀಶಿಯನ್ಸ್ | ಬೇಸಿಕ್ | 10,790.00 | 10,530.00 | 10,010.00 |
| | | ವಿಡಿಎ | 1082.00 | 1082.00 | 1082.00 |
| | | ಮೊತ್ತ | 11,872.00 | 11,612.00 | 11,092.00 |
| 12. | ಲಿಫ್ಟ್ ಆಟೆಂಡರ್ | ಬೇಸಿಕ್ | 10,010.00 | 9,660.00 | 9,100.00 |
| | | ವಿಡಿಎ | 1082.00 | 1082.00 | 1082.00 |
| | | ಮೊತ್ತ | 11,092.00 | 10,742.00 | 10,182.00 |
| 13. | ಲೆಕ್ಕ ಬರೆಯುವವರು | ಬೇಸಿಕ್ | 12,350.00 | 12,090.00 | 11,310.00 |
| | | ವಿಡಿಎ | 1082.00 | 1082.00 | 1082.00 |
| | | ಮೊತ್ತ | 13,432.00 | 13,172.00 | 12,392.00 |
| 14 | ಗುಮಾಸ್ತ/ಟೈಪಿಸ್ಟ್/ಸ್ಟೋರ್‌ಕೀಪರ್/ಕ್ಯಾಷಿಯರ್ | ಬೇಸಿಕ್ | 12,090.00 | 11,830.00 | 11,050.00 |
| | | ವಿಡಿಎ | 1082.00 | 1082.00 | 1082.00 |
| | | ಮೊತ್ತ | 13,172.00 | 12,912.00 | 12,132.00 |
| 15. | ಕ್ಲೀನರ್/ಅಟೆಂಡರ್/ವಾಚ್‌ಮೆನ್/ಸ್ಲೀಪರ್ | ಬೇಸಿಕ್ | 10,010.00 | 9,660.00 | 9,100.00 |
| | ಆಫೀಸ್ ಬಾಯ್/ಆಫೀಸ್ ಅಸಿಸ್ಟೆಂಟ್/ಎಲ್ಲಾ | ವಿಡಿಎ | 1082.00 | 1082.00 | 1082.00 |
| | ವರ್ಗದ ಮೇಲ್ಕಾಣಿಸಿದ ಕೆಲಸವನ್ನು ಮಾಡುವವರು | ಮೊತ್ತ | 11,092.00 | 10,742.00 | 10,182.00 |
| 16. | ಬೇರೆ ವರ್ಗದ ಅನ್ ಸ್ಕಿಲ್ಲ್‌ಡ್ ಕೆಲಸಗಾರರನ್ನು | ಬೇಸಿಕ್ | ------- | ------- | ------- |
| | ಪಟ್ಟಿಯಲ್ಲಿ ನಮೂದಿಸಿಲ್ಲ | ವಿಡಿಎ | | | |
| | | ಮೊತ್ತ | | | |

ವಲಯ:– ಎ: ಬೆಂಗಳೂರು ಸಿಟಿ ಏರಿಯಾ ಮತ್ತು ಮುನಿಸಿಪಲ್ ಕಾರ್ಪೋರೇಷನ್ ಏರಿಯಾ ಹೊರತುಪಡಿಸಿ, ರಾಜ್ಯದಲ್ಲಿ

ವಲಯ:– ಬಿ: ರಾಜ್ಯದ ಜಿಲ್ಲೆಯ ಹೆಡ್ ಕ್ವಾರ್ಟರ್ಸ್

ವಲಯ:– ಸಿ: ರಾಜ್ಯದ ಇತರೆ ಏರಿಯಾ ಒಳಪಟ್ಟಿರದೆ ಇದ್ದು ಇದು **ವಲಯ–ಎ, ವಲಯ–ಬಿ** ಫುಡ್ ಡಿಡಕ್ಷನ್.

ವಿಡಿಎ:– ಎಲ್ಲಾ ವರ್ಗದ ಕಾರ್ಮಿಕರಿಗೆ 4 ಪೈಸೆ ಪ್ರತಿ ಪಾಯಿಂಟಗೆ ದಿನವೊಂದಕ್ಕೆ ಇದರ ಮೇಲ್ಪಟ್ಟ 6205 ಪಾಯಿಂಟ್‌ಗಳು

**ತುಟ್ಟಿ ಭತ್ಯೆ ಹೆಚ್ಚಳ:– ಕರ್ನಾಟಕ ಸರ್ಕಾರದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಇಲಾಖೆಯಿಂದ ನಮ್ಮ ಸಂಘಕ್ಕೆ ಬಂದಿರುವ ಮಾಹಿತಿಯಂತೆ 2017ನೇ ಸಾಲಿನ ಕರ್ನಾಟಕ ರಾಜ್ಯದ ಔದ್ಯಮಿಕ ಕಾರ್ಮಿಕ ಗ್ರಾಹಕ ಬೆಲೆ ಸೂಚ್ಯಂಕದ ವಾರ್ಷಿಕ ಸರಾಸರಿ ಅಂಶವನ್ನು 7106 ಗಳಿಗೆ ಹೆಚ್ಚಿಸಲಾಗಿದೆ.**

2016ನೇ ಸಾಲಿನಲ್ಲಿ ಕಾರ್ಮಿಕ ಗ್ರಾಹಕ ಬೆಲೆ ಸೂಚ್ಯಂಕ 6537 ಅಂಶಗಳಾಗಿತ್ತು. ಮುಂದಿನ ಸಾಲಿಗೆ 263 ಅಂಶಗಳ ಹೆಚ್ಚಳವಾಗಿದ್ದು, (263X0.04X30=315.60) 2018–2019ನೇ ಸಾಲಿಗೆ ಎಲ್ಲಾ ವರ್ಗದ ಹೋಟೆಲು ಕಾರ್ಮಿಕರಿಗೆ ಅನ್ವಯವಾಗುವಂತೆ ರೂ.315.60 ಗಳ ತುಟ್ಟಿ ಭತ್ಯೆಯು ಏರಿಕೆಯಾಗಿದೆ. ಪ್ರಸಕ್ತ ವರ್ಷ (7106–6843=263) Points ಹೆಚ್ಚಳ




## ಕೇಂದ್ರ ಕಾನೂನು ಸಚಿವರ ಭೇಟಿ

ಕರ್ನಾಟಕ ಹೋಟೆಲು ಉದ್ಯಮದಾರರ ಪರವಾಗಿ ಕೆಪಿಹೆಚ್‌ಆರ್‌ಎ ಮತ್ತು ಬಿಬಿಹೆಚ್‌ಎ ಪದಾಧಿಕಾರಿಗಳು ಕೇಂದ್ರ ಕಾನೂನು ಮತ್ತು ನ್ಯಾಯ ಖಾತೆ ಸಚಿವ ಶ್ರೀ ರವಿಶಂಕರಪ್ರಸಾದ್ ಅವರನ್ನು ಭೇಟಿ ಮಾಡಿ ಹೋಟೆಲು ಉದ್ಯಮದ ಸಮಸ್ಯೆಗಳ ಪರಿಹಾರಕ್ಕಾಗಿ ಮನವಿ ಸಲ್ಲಿಸಿದರು.

## ಕೇಂದ್ರ ವಿತ್ತ ಸಹಾಯಕ ಸಚಿವರ ಭೇಟಿ

ಕರ್ನಾಟಕ ಹೋಟೆಲು ಉದ್ಯಮದಾರರ ಪರವಾಗಿ ಕೆಪಿಹೆಚ್‌ಆರ್‌ಎ ಮತ್ತು ಬಿಬಿಹೆಚ್‌ಎ ಪದಾಧಿಕಾರಿಗಳು ಕೇಂದ್ರ ವಿತ್ತ ಸಹಾಯಕ ಸಚಿವ ಶ್ರೀ ಶಿವಪ್ರತಾಪ ಶುಕ್ಲಾ ಅವರನ್ನು ಇತ್ತೀಚೆಗೆ ಭೇಟಿ ಮಾಡಿ ಹೋಟೆಲು ಉದ್ಯಮದ ಸಮಸ್ಯೆಗಳ ಪರಿಹಾರಕ್ಕಾಗಿ ಮನವಿ ಸಲ್ಲಿಸಿದರು.






## ಎಸ್ಸೆಸ್ಸೆಲ್ಸಿ 2ನೇ ರ‍್ಯಾಂಕ್ ಶ್ರೀ ಹರಿ ಅಡಿಗ

ವಿಶ್ವೇಶ್ವರಪುರಂನ ನ್ಯೂವುಡ್‌ಲ್ಯಾಂಡ್ಸ್ ಹೋಟೆಲಿನ ಶ್ರೀ ಪದ್ಮನಾಭ ಅಡಿಗರ ಮೊಮ್ಮಗ ಶ್ರೀ ಹರಿ ಅಡಿಗ (ಶ್ರೀಪಾದ ಅಡಿಗ ಮತ್ತು ಶ್ರೀಮತಿ ಭವಾನಿದಂಪತಿಗಳ ಸುಪುತ್ರ) ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 624 ಅಂಕಗಳೊಂದಿಗೆ ರಾಜ್ಯಕ್ಕೆ ಎರಡನೇ ರ‍್ಯಾಂಕ್‌ಗಳಿಸಿದ್ದಾನೆ. ಶ್ರೀ ಹರಿ ಅಡಿಗನಿಗೆ ಅಭಿನಂದನೆಗಳನ್ನು ಸಲ್ಲಿಸುವುದರೊಂದಿಗೆ ಬೃಹತ್ ಬೆಂಗಳೂರು ಹೋಟೆಲುಗಳ ಸಂಘವು ಉತ್ತಮ ಭವಿಷ್ಯವನ್ನು ಹಾರೈಸುತ್ತದೆ.


Range Starting From
₹6999*
India's
Largest Selling
Billing Printer
Bloom Your Tech Fantasy
wep
Best suited for
Hotel & Restaurants
Snacks Center, Juice shop,
Ice cream Parlor, Gift Shop,
Garments Shop & Many more...
BP-JOY
₹ 6999/-
BP-25T PLUS
₹ 14,400/-
BP-85T PLUS
₹ 16,800/-
BP-2100
₹ 22,990/-
BP-5000 PLUS
₹ 27,500/-
TH 400+
₹ 12,600/-
enquiry@wepindia.com
www.wepmyshop.com
+91 98440 19119
1800 425 9494

ಶುಭಾಶಯಗಳೊಂದಿಗೆ

ಜಾಹೀರಾತು




# ಹೋಟೆಲ್ ದ್ವಾರಕಾ

ಆನಂದರಾವ್ ಸರ್ಕಲ್, ಬೆಂಗಳೂರು–560 009

ಉದ್ಯಾನ ನಗರಿಯ ಮಧ್ಯದಲ್ಲಿ ಹೆಸರಾಂತ ಆನಂದರಾವ್ ವೃತ್ತದ ಅಂಚಿನಲ್ಲಿ ರೈಲ್ವೆ,
ಸಾರಿಗೆ ನಿಲ್ದಾಣಗಳ ಸಮೀಪದಲ್ಲಿ, ವಿವಿಧ ಕಛೇರಿ, ಕೋರ್ಟುಗಳ ಸನಿಹದಲ್ಲಿ
ವ್ಯಾಪಾರ ವಹಿವಾಟು ಕೇಂದ್ರಗಳ ಸಾನಿಧ್ಯದಲ್ಲಿ ರಾರಾಜಿಸುವ
ನಿಮ್ಮ ಕುಟುಂಬದವರ ಅಚ್ಚುಮೆಚ್ಚಿನ ಮೆಚ್ಚುಗೆಯ ವಸತಿ ಗೃಹ.

**ನಮ್ಮ ವಿಶೇಷತೆಗಳು**

ಸಕಲ ಸೌಲಭ್ಯಗಳನ್ನೊಳಗೊಂಡ, ಉತ್ತಮ ಗಾಳಿ–ಬೆಳಕಿರುವ, ನಿರಂತರ ನೀರು
ವಿದ್ಯುತ್ ಸರಬರಾಜಿರುವ, ಅತಿ ಹೆಚ್ಚಿಲ್ಲದ ಬಾಡಿಗೆಯಿರುವ ವಿಶಾಲವಾದ ಕೊಠಡಿಗಳು,
ಮನಸ್ಸಿಗೆ ಶಾಂತಿ, ನೆಮ್ಮದಿ ತರುವ ಶಾಂತ ವಾತಾವರಣ, ನಮ್ರತೆಯ ಸೇವೆ
ಎಸ್.ಟಿ.ಡಿ. / ಐ.ಎಸ್.ಡಿ. ಮತ್ತು ಕಾರು ನಿಲ್ಲಿಸಲು ಅನುಕೂಲತೆ ಇತ್ಯಾದಿ......

ಎನ್.ಆರ್. ನಾರಾಯಣರಾವ್
ಮೇನೆಜಿಂಗ್ ಡೈರೆಕ್ಟರ್

ದೂರವಾಣಿ : 22265011 (8 ಮಾರ್ಗಗಳು) 2226 8263, 2226 8264

ಹಾರ್ದಿಕ
ಶುಭಾಶಯಗಳನ್ನು
ಕೋರುವ

# ಪ್ರಿಯದರ್ಶಿನಿ ರೆಸ್ಟೋರೆಂಟ್

ಶ್ರೀ ರಾಮಕೃಷ್ಣ ಲಾಡ್ಜ್ ಕಟ್ಟಡ, ನಂ. 262,
ಸುಬೇದಾರ್ ಛತ್ರಂ ರಸ್ತೆ,
ಬೆಂಗಳೂರು – 560009
ದೂರವಾಣಿ: 22263793

# ಶ್ರೀ ಮಂಜುನಾಥ ಸ್ವೀಟ್ಸ್

ಮದುವೆ, ಮುಂಜಿ ಮತ್ತಿತರ ವಿಶೇಷ
ಸಮಾರಂಭಗಳಿಗೆ ಉತ್ತಮ ಗುಣಮಟ್ಟದ
ಸಿಹಿತಿಂಡಿ ಮತ್ತು ಖಾರ ತಿಂಡಿಗಳನ್ನು
ಹೋಲ್ ಸೇಲ್ ದರದಲ್ಲಿ ತಯಾರಿಸಿ
ಕೊಡಲಾಗುವುದು. ಹೋಟೆಲುಗಳಿಗೆ
ಜಾಮೂನು ಮತ್ತಿತರ ಸಿಹಿತಿನಿಸುಗಳನ್ನು
ವಿಶೇಷ ರಿಯಾಯಿತಿ ದರದಲ್ಲಿ
ಸರಬರಾಜು ಮಾಡಲಾಗುವುದು.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:
**ಶ್ರೀ ಲೋಕೇಶ್,** ಮಾಲೀಕರು,
**ಶ್ರೀ ಮಂಜುನಾಥ ಸ್ವೀಟ್ಸ್,**
ನಂ. 511, 64ನೇ ಅಡ್ಡರಸ್ತೆ, 5ನೇ ವಿಭಾಗ, ರಾಜಾಜಿನಗರ,
ಬೆಂಗಳೂರು–560010. ದೂರವಾಣಿ : 9886033573

RNP/KA/BGS/2172/2018-20, Licensed to post without prepayment
License No. WPP. 316, Posted at : PSO, Mysore Road, Banglaore. On 13 th every Month
Date of Published 09-05-2018




**If undelivered please return to : Bruhat Bengaluru Hotel Association :** # 87, "Shrestaboomi", Room No. 307, K.R. Road, V.V. Puram, Bengaluru-04, mail : bangalorehotelsassn@gmail.com. **"Athithi Devobhava"**- Printed and Published by K.N. Vasudeva Adiga, owned by : **Bruhat Bangalore Hotels Association,** Printed at Anu Process, 348/1, Bileka Halli, B.T.M. Layout, 6th Corss, Bannerghatta Road, Bangalore-560076. Published at Apt. No. 307, 3rd Floor, Shreshta Bhoomi, 87, K.R. Road, Bangalore-560004, **Editor : B. Chandrashekar Hebbar.**